<u>ಅಸಲು ದಾವಾ ಸಂಖ್ಯೆಃ **-19/16**</u> ಡಿ.ಡಬ್ಲ್ಯೂ**:-1**

ದಿನಾಂಕಃ **17.10.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ಸಾಕ್ಷಿಗೆ ಗಂಗಮ್ಮರವರ ಮರಣ ಪ್ರಮಾಣ ಪತ್ರವನ್ನು ತೋರಿಸಿ ಸದರಿ ಮರಣ ಪ್ರಮಾಣ ಪತ್ರವು ಯಾರಿಗೆ ಸಂಬಂಧಿಸಿದ್ದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಹೆಂಡತಿಯಾದ ವಿನೋದ ಜಿ ರವರ ಅಜ್ಜಿ ಎಂದು ನುಡಿಯುತ್ತಾರೆ. ಸದರಿ ಮರಣ ಪ್ರಮಾಣ ಪತ್ರವನ್ನು ನಿಪಿ-**14** ಎಂದು ಗುರುತಿಸಲಾಯಿತು. ಸಾಕ್ಷಿಗೆ ಆರ್ ಆರ್ ನಂ. ಜಿಪಿ ಎ **27950** ರ ನಾಗೇಂದ್ರಪ್ಪರವರ ವಿದ್ಯುತ್ ಬಿಲ್ ನ ರಶೀದಿಯನ್ನು ತೋರಿಸಿ ಸದರಿ ವಿದ್ಯುತ್ ಬಿಲ್ ನಿಪಿ-**11** ರ ಛಾಯಾಚಿತ್ರದಲ್ಲಿ ಇರುವ ಹೊಸದಾಗಿ ಕಟ್ಟಿದ ಮನೆಗೆ ಸಂಬಂಧಪಟ್ಟಿದ್ದು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಆರ್ ಆರ್ ನಂ. ಜಿಪಿ ಎಲ್ **51** ರ ನಾಗೇಂದ್ರಪ್ಪರವರ ವಿದ್ಯುತ್ ಬಿಲ್ ನ ರಶೀದಿಯನ್ನು ತೋರಿಸಿ ಸದರಿ ವಿದ್ಯುತ್ ಬಿಲ್ ನಿಪಿ-**11** ರ ಛಾಯಾಚಿತ್ರದಲ್ಲಿ ಇರುವ ಹಂಚಿನ ಮನೆಗೆ ಸಂಬಂಧಪಟ್ಟಿದ್ದು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗಂಗಮ್ಮರವರು ಜೀವಿತಾ ಕಾಲದಲ್ಲಿ ನಿಪಿ-**1** ರಿಂದ **13** ಛಾಯಾಚಿತ್ರದಲ್ಲಿ ಇರುವ ಆಸ್ತಿಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಗಂಗಮ್ಮರವರು **2001** ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ಗಂಗಮ್ಮರವರು ನಿಪಿ-**11** ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ಹಂಚಿನ ಮನೆಯಲ್ಲಿ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗಂಗಮ್ಮರವರು ನಿಪಿ-**11** ಛಾಯಾಚಿತ್ರದ ಹಂಚಿನ ಮನೆಯಲ್ಲಿ ತೀರಿಕೊಂಡಿರುವ ವಿಚಾರ ನಿಮಗೆ ಗೊತ್ತಿಲ್ಲದಿದ್ದ ಕಾರಣ ಅವರ ಕುಟುಂಬದ ವ್ಯವಹಾರದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಗಂಗಮ್ಮರವರಿಗೆ **3** ಜನ ಮಕ್ಕಳು ಅಂದರೆ ರುದ್ರಪ್ಪ, ಹಾಲಪ್ಪ ಮತ್ತು ನಾಗೇಂದ್ರಪ್ಪ. ರುದ್ರಪ್ಪರವರು ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುತ್ತಾರೆ. ಹಾಲಪ್ಪ ಮತ್ತು ನಾಗೇಂದ್ರಪ್ಪರವರು ವ್ಯವಸಾಯ ಕೆಲಸವನ್ನು

ಮಾಡುತ್ತಿದ್ದರು. ಗಂಗಮ್ಮರವರ ಜೀವಿತಾ ಅವಧಿಯಲ್ಲಿ ರುದ್ರಪ್ಪರವರ ಹೆಸರಿನಲ್ಲಿ ದಾವಣಗೆರೆಯಲ್ಲಿ ಒಂದು ಮನೆಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ರುದ್ರಪ್ಪರವರಿಗೆ **3** ಜನ ಮಕ್ಕಳು ಅಂದರೆ ವಿನೋದಾ ಜಿ, ಪುಷ್ಪಾ ಮತ್ತು ಮಂಜುಳಾ. ರುದ್ರಪ್ಪನ ಹೆಂಡತಿಯ ಹೆಸರು ಚಂದ್ರಮ್ಮ. ರುದ್ರಪ್ಪ ತನ್ನ ಹೆಂಡತಿ ಮಕ್ಕಳೊಂದಿಗೆ ದಾವಣಗೆರೆ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ರುದ್ರಪ್ಪರವರು ತನ್ನ ಕುಟುಂಬದ ಜೊತೆಯಲ್ಲಿ ದಾವಣಗೆರೆ ಮನೆಯಲ್ಲಿ **1965** ರಿಂದ **1985** ವರೆಗೂ ವಾಸವಾಗಿದ್ದರು. ಈಗ ಪುಷ್ಪಾ ತೀರಿಕೊಂಡಿರುತ್ತಾರೆ. ವಿನೋದಾ ಜಿ ಮತ್ತು ಮಂಜುಳಾ ಜೀವಂತವಿರುತ್ತಾರೆ. ಪುಷ್ಪಾರವರು ಸುಮಾರು **15-20** ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಈಗ ಅವರ ಮಗ ರಾಕೇಶ ಜೀವಂತವಿರುತ್ತಾರೆ. ರುದ್ರಪ್ಪನ ಕೊನೆಯ ಮಗಳು ಮಂಜುಳಾ ರವರು ದಾವಣಗೆರೆಯಲ್ಲಿ ಇರುವ ಮನೆಗೆ ಸಂಬಂಧಿಸಿದಂತೆ ಭಾಗಂಶ ಕೋರಿ ದಾವಣಗೆರೆ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ .

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.